ಓ ಎಸ್ ನಂ.**368/2013**
ಪಿಡಬ್ಲ್ಯೂ. **2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **03.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ  ಶ್ರೀ ಎಸ್ ಎನ್  ವಕೀಲರಿಂದಃ–

ನಾನು **30** ವರ್ಷದಿಂದ ದುಡ್ಡನಹಳ್ಳಿ, ಕೊರಟಗೆರೆ ತಾಲ್ಲೂಕಿನಲ್ಲಿ ವಾಸವಾಗಿದ್ದೇನೆ. ಲಕ್ಕೇನಹಳ್ಳಿಯಿಂದ ದುಡ್ಡನಹಳ್ಳಿಗೆ ಸುಮಾರು **10** ಕೀ ಮೀ ಆಗುತ್ತದೆ. ಈ ದಾವೆಯನ್ನು ಕೃಷ್ಣಪ್ಪನವರು ಬೊಮ್ಮಲಿಂಗಯ್ಯನ ಮೇಲೆ ಹಾಕಿದ್ದಾರೆ. ದಾವಾ ಆಸ್ತಿಯ ಸರ್ವೆ ನಂಬರು ಮತ್ತು ಚಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿದ್ದಿರಾ ಎಂದರೆ ಇಲ್ಲ. ನಾನು ಇದೇ ನ್ಯಾಯಾಲಯದಲ್ಲಿ ಓ ಎಸ್ **286/2024** ರಲ್ಲಿ **1, 4** ಮತ್ತು **6** ನೇ ಪ್ರತಿವಾದಿಯ ವಿರುದ್ದ ಸರ್ವೆ ನಂ. **23/2 2** ಎಕರೆ **11** ಗುಂಟೆಗೆ ಸಂಬಂಧಿಸಿದಂತೆ ದಾವೆ ಹಾಕಿದ್ದೇನೆ ಎಂದರೆ ಸರಿ. ಸುಮಾರು **10–15** ವರ್ಷದಿಂದ ನನ್ನ ಮತ್ತು **1** ನೇ ಪ್ರತಿವಾದಿಯ ನಡುವೆ ಯಾವುದೇ ಮಾತುಕತೆ ಇಲ್ಲ. ವಾದಿಯ ತಂದೆ ಹೆಸರು ಕಾವಲಪ್ಪ ಎಂದರೆ ಸರಿಯಲ್ಲ. ಕಾವಲಪ್ಪನವರ ತಂದೆ ಹೆಸರು ಗುಟ್ಟೆಕೆಂಪಣ್ಣ ಎಂದರೆ ಗೊತ್ತಿಲ್ಲ. ವಾದಿಯರು ಈಗ ಬೈರಗುಡ್ಲು ಗ್ರಾಮ, ಕೊರಟಗೆರೆ ತಾಲ್ಲೂಕಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯು ಹುಟ್ಟಿದಾಗಿನಿಂದಲೂ ಅಲ್ಲೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆದರೆ ಸುಮಾರು **25** ವರ್ಷದಿಂದ ಬೈರಗುಡ್ಲು ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ.

ನನಗೆ ಬಿ ಚಿಕ್ಕಣ್ಣ ಯಾರು ಎಂದು ಗೊತ್ತಿಲ್ಲ. ಬಿ ಚಿಕ್ಕಣ್ಣನವರ ತಂದೆ ಬೊಮ್ಮಯ್ಯ ಎಂದರೆ ಸಾಕ್ಷಿಯು ಕೇವಲ ಚಿಕ್ಕಣ್ಣನ ತಂದೆ ಹೆಸರು ಬೊಮ್ಮಯ್ಯ ಎಂದು ಹೇಳುತ್ತಾರೆ. ಸದರಿ ಚಿಕ್ಕಣ್ಣ ಬೈರಗುಡ್ಲು ಗ್ರಾಮದಲ್ಲಿ ವಾಸ ಮಾಡಿರಲಿಲ್ಲ ಎಂದರೆ ಸರಿ. ಚಿಕ್ಕಣ್ಣನನ್ನು ನಾನು ನೋಡಿರುತ್ತೇನೆ. ಅವರು ಲಕ್ಕೇನಹಳ್ಳಿಯಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರ ಅಂತಿಮ ಸಂಸ್ಕಾರವನ್ನು ಲಕ್ಕೇನಹಳ್ಳಿಯಲ್ಲಿ **1** ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸರಿ.

ದಾವಾ ಸ್ವತ್ತುಗಳ ಪೈಕಿ ಮೂರು ಸ್ವತ್ತುಗಳು ಜೋಡಿದಾರರಿಗೆ ಸೇರಿದ ಜಮೀನು ಎಂದರೆ ಗೊತ್ತಿಲ್ಲ. ದಿನಾಂಕಃ **02.02.1968** ರಲ್ಲಿ ಇನಾಂ ಅಬಾಲಿಷನ್ ಕಾಯ್ದೆ ಪ್ರಕಾರ **1** ನೇ ಪ್ರತಿವಾದಿಗೆ ಸದರಿ ಆಸ್ತಿಗಳು ಮಂಜೂರಾಗಿವೆ ಎಂದರೆ ಗೊತ್ತಿಲ್ಲ. ವಾದಿ ಮತ್ತು **1** ನೇ ಪ್ರತಿವಾದಿಯು ಸುಮಾರು **40** ವರ್ಷಗಳಿಂದ ಬೇರೆ ಬೇರೆ ವಾಸ ಮಾಡುತ್ತಿದ್ದಾರೆ. ವಾದಿಗೆ ಬೈರಗುಡ್ಲು ಗ್ರಾಮದಲ್ಲಿ ಮನೆ ಮತ್ತು ಜಮೀನು ಇದೆ ಎಂದರೆ ಸರಿ. ವಾದಿಗೆ ಎಷ್ಟು ಎಕರೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಬೈರಗುಡ್ಲು ಗ್ರಾಮದಲ್ಲಿರುವ ಮನೆ ಮತ್ತು ಜಮೀನನ್ನು ಈ ಕೇಸಿನಕಲ್ಲಿ ಸೇರಿಸಿದ್ದಾರಾ ಎಂದರೆ ಗೊತ್ತಿಲ್ಲ. ವಾದಿಯು ಚಿಕ್ಕಣ್ಣನ ಜೊತೆ ವಾಸ ಇದ್ದ ಬಗ್ಗೆ ಏನಾದರೂ ದಾಖಲೆ ನೋಡಿದ್ದಿರಾ ಎಂದರೆ ಇಲ್ಲ ಆದರೆ ಲಗ್ನಪತ್ರಿಕೆ ನೋಡಿದ್ದೇನೆ.

ಪಿಡಬ್ಲ್ಯೂ–**1** ವಾದಿಯ ಹೆಂಡತಿ. ಅವರು ಬೈರಗುಡ್ಲು ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ಅವರ ಸ್ವಂತ ಊರು ಬೈರಗುಡ್ಲು ಗ್ರಾಮ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಪಿಡಬ್ಲ್ಯೂ **–1** ರವರ ತಾಯಿ ಮನೆ ಎಂದು ಹೇಳುತ್ತಾರೆ. ಪಿಡಬ್ಲ್ಯೂ–**1** ರವರು ಲಕ್ಕೇನಹಳ್ಳಿಯಲ್ಲಿ ಯಾವತ್ತೂ ಕೂಡ ವಾಸ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಅವರು ಲಕ್ಕೇನಹಳ್ಳಿಯಲ್ಲಿ ವಾಸ ಮಾಡುತ್ತಿದರು ಎಂದು ತೋರಿಸಲು ರೇಶನ್ ಕಾರ್ಡ್ ಅಥವಾ ಓಟರ್ ಲೀಸ್ಟ್ ನೋಡಿದ್ದಿರಾ ಎಂದರೆ ಇಲ್ಲ . ವಾದಿಯು **40** ವರ್ಷದಿಂದ ವ್ಯವಸಾಯ ಮಾಡುತ್ತಿದ್ದಾರೆ. ಅವರು ಎಷ್ಟು ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯ ವರಮಾನವನ್ನು **1** ನೇ ಪ್ರತಿವಾದಿಗೆ ಕೊಡುವುದಿಲ್ಲ ಎಂದರೆ ಸರಿ. **1** ನೇ ಪ್ರತಿವಾದಿ ದಾವಾ ಸ್ವತ್ತುಗಳೆನ್ನೆಲ್ಲಾ ಉಳುಮೆ ಮಾಡುತ್ತಿದ್ದಾರೆ. ಅವರು ಸುಮಾರು **12** ಎಕರೆಗಿಂತ ಹೆಚ್ಚು ಜಮೀನಿನಲ್ಲಿ ಸುಮಾರು **60** ವರ್ಷದಿಂದ ಉಳುಮೆ ಮಾಡುತ್ತಿದ್ದಾರೆ. ದಾವಾ ಆಸ್ತಿಗಳಿಂದ ಬಂದ ಆದಾಯವನ್ನೆಲ್ಲಾ **1** ನೇಪ್ರತಿವಾದಿ ಇಟ್ಟುಕೊಳ್ಳುತ್ತಿದ್ದಾರೆ.

**2** ನೇ ಪ್ರತಿವಾದಿ **1** ನೇ ಪ್ರತಿವಾದಿಯ ಹೆಂಡತಿ. ವಾದಿಯು **1** ನೇ ಪ್ರತಿವಾದಿಯೊಂದಿಗೆ ಲಕ್ಕೇನಹಳ್ಳಿಯಲ್ಲಿ ಯಾವತ್ತೂ ಕೂಡ ವಾಸ ಮಾಡುತ್ತಿರಲಿಲ್ಲ ಎಂದರೆ ವಾದಿಯು ಸ್ವಲ್ಪ ದಿವಸ ವಾಸವಾಗಿದ್ದರು ಎಂದು ಹೇಳುತ್ತಾರೆ. ಈ ರೀತಿ

ಸ್ವಲ್ಪ ದಿನ ವಾಸ ಮಾಡುತ್ತಿದ್ದರು ಎಂದು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದಿರಾ ಎಂದರೆ ಗೊತ್ತಿಲ್ಲ. ವಾದಿಯು ಲಕ್ಕೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ತೋರಿಸಲು ರೇಶನ್ ಕಾರ್ಡ್ ಮತ್ತು ಓಟರ್ ಲೀಸ್ಟ್ ನೋಡಿದ್ದಿರಾ ಎಂದರೆ ಇಲ್ಲ.

1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಎರಡು ಬೋರ್ ವೆಲ್ ಹಾಕಿಸಿದ್ದಾರೆ ಎಂದರೆ ಸರಿ. ಅದಕ್ಕೆ ವಿದ್ಯುತ್ಚಕ್ತಿಯನ್ನು 1 ನೇ ಪ್ರತಿವಾದಿಯ ಹೆಸರಿನಲ್ಲೆ ಹಾಕಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿ ಪೈಕಿ ಎರಡು ಆಸ್ತಿಗಳನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಗೊತ್ತಿಲ್ಲ. ನಾನು ಚಿಕ್ಕಣ್ಣನ ಅಂತಿಮ ಸಂಸ್ಕಾರಕ್ಕೆ ಹೋಗಿದ್ದೆನು. ಚಿಕ್ಕಣ್ಣ ಮೃತಪಟ್ಟು 50 ವರ್ಷವಾಗಿರಬಹುದು. ಚಿಕ್ಕಣ್ಣ ಮೃತಪಟ್ಟ ನಂತರ 1 ನೇಪ್ರತಿವಾದಿಯೇ ದಾವಾ ಆಸ್ತಿಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳ ಖಾತೆ ಪಹಣಿಗಳು ಯಾರ ಹೆಸರಿನಲ್ಲಿವೆ ಎಂದರೆ ಗೊತ್ತಿಲ್ಲ. ವಾದಿಯು ಈ ಕೇಸಿನಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನೀವು ವಾದಿ ಮತ್ತು ಪ್ರತಿವಾದಿಯರು ದಾವಾ ಜಮೀನಿನಲ್ಲಿ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದಾರೆಂದು ಹೇಳಿ ಬರೆಸಿದ್ದಿರಾ ಎಂದರೆ ಗೊತ್ತಿಲ್ಲ. ಈ ಪ್ರಮಾಣ ಪತ್ರದಲ್ಲಿ ಯಾವ ವ್ಯಾಜ್ಯ ಕಾರಣದ ತಾರೀಖು ಬರೆಸಿದ್ದಿರಾ ಎಂದರೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಏನು ವ್ಯಾಜ್ಯ ಕಾರಣ ಬರೆದಿದ್ದಾರೆಂದು ಗೊತ್ತಿಲ್ಲ. ಪ್ರಮಾಣ ಪತ್ರ ತಯಾರು ಮಾಡಲು ಮಾಹಿತಿ ಯಾರು ಕೊಟ್ಟಿದ್ದಾರೆಂದು ಗೊತ್ತಿಲ್ಲ. ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಯರೊಂದಿಗೆ ದ್ವೇಷ ಇರುವ ಕಾರಣ ಹಾಗೂ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.

ಓ ಎಸ್ ನಂ.**368/2013**

ಪಿಡಬ್ಲ್ಯೂ. **2**